Lack of suitable security arrangements on arrival of Sri K. S. Hegde, Judge of Supreme Court

†ಶ್ರೀ ವಾಟಾಳ ನಾಗರಾಜ.—ಈಹೊತ್ತು ಸರ್ಕಾರ ನಡೆಸತಕ್ಕ ಕಾಂಗ್ರೆಸ್ ಪಕ್ಷ ತಮ್ಮ ಪಕ್ಷದವರನ್ನು ಎತ್ತಿಕಟ್ಟಿ ಶ್ರೀ ಕೆ. ಎಸ್. ಹೆಗಡೆ ಅವರ ವಿರುದ್ಧ ಪ್ರತಿಭಟನಾ ಮೆರವಣಿಗೆ ಮಾಡಿಸುವುದಕ್ಕೆ ತಯಾರು ಮಾಡುತ್ತಿದೆ. ಈ ದೇಶದ ಇತಿಹಾಸದಲ್ಲಿ ಸರ್ಕಾರದವರು ತಾವೇ ಜೀಪಿಯವರ ಮೇಲೆ ಯುದ್ಧಕ್ಕೆ ಹೊರಟಿರುವುದು ಇದೇ ಮೊದಲು. ಮೈಸೂರು ಬ್ಯಾಂಕ ಜಾಕದಿಂದ ಬೆಂಗಳೂರು ಜಿಲ್ಲಾ ಆಡಳಿತ ಕಾಂಗ್ರೆಸ್‌ನವರು ಒಬ್ಬ ಶ್ರೇಷ್ಠ ನ್ಯಾಯಾಧೀಶರು, ದಿಟ್ಟ ನ್ಯಾಯಾಧೀಶರು.....

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಈ ವಿಚಾರವಲ್ಲಿ ಸರ್ಕಾರದವರು ಎಂದು ಹೇಳುವಾಗ ಜಾಗರೂಕತೆಯಿಂದ ಹೇಳಬೇಕು. ಮಂತ್ರಿಮಂಡಲದಲ್ಲಿ ತೀರ್ಮಾನ ಮಾಡಿ ಏನಾದರೂ ಆರ್ಡರ ಕೊಟ್ಟಿದ್ದಾರೆಯೇ, ಗೆಜೆಟಿನಲ್ಲಿ ಏನಾದರೂ ಬಂದಿದೆಯೇ? ಸರ್ಕಾರ ಸರ್ಕಾರ ಎಂದು ಏಕೆ ಹೇಳುತ್ತಿರಿ?

ಶ್ರೀ ವಾಟಾಳ ನಾಗರಾಜ.—ಸರ್ಕಾರ ನಡೆಸತಕ್ಕ ಪಕ್ಷದವರು.....

ಅಧ್ಯಕ್ಷರು.—ಆ ಪಕ್ಷಕ್ಕೂ, ಈ ಸಭೆಗೂ ಸಂಬಂಧವೇನಿದೆ? ಆ ಪಕ್ಷದವರು ಮಾಡಿದರೆ ಈ ಪಕ್ಷದವರೂ ಮಾಡಬಹುದು. ಆದರೆ ಇಲ್ಲಿ ಹೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ವಾಟಾಳ ನಾಗರಾಜ.—ಸರ್ಕಾರ ಪ್ರಚೋದನೆ ಮಾಡುತ್ತಿದೆ ಎಂದು ನನ್ನ ಆರೋಪಣೆ. ಈಗ ಸರ್ಕಾರ ನಡೆಸುತ್ತಿರುವ ಪಕ್ಷ, ಆಡಳಿತ ಕಾಂಗ್ರೆಸ್ ಪಕ್ಷ. ಈ ಹೊತ್ತು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದ ಶ್ರೀ ಕೆ. ಎಸ್. ಹೆಗಡೆ ಅವರ ವಿರುದ್ಧ ಪ್ರತಿಭಟನೆ ಮಾಡುವುದಕ್ಕೆ ಹೊರಟಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಒಂದು ಕಡೆ ಸನ್ಮಾನ ಮಾಡತಕ್ಕ ಸಭೆ ನಿಲ್ಲಿಸುವುದಕ್ಕೆ ಹೊರಟಿದ್ದಾರೆ. ಸಮಾರಂಭ ನಡೆಸತಕ್ಕದ್ದು ಅವರವರ ವೈಯಕ್ತಿಕ ಅಭಿಪ್ರಾಯ. ಆದ್ದರಿಂದ ಅಂಥ ಸಭೆಗಳನ್ನು ನಿಲ್ಲಿಸತಕ್ಕದ್ದು ಸರಿಯಲ್ಲ. ಆಡಳಿತ ಕಾಂಗ್ರೆಸ್ ಪಕ್ಷದ ನಾಯಕರೂ, ಉಪನಾಯಕರೂ ಇಲ್ಲಿದ್ದಾರೆ.

ಅಧ್ಯಕ್ಷರು.—ಸರ್ಕಾರಕ್ಕೂ ಇದಕ್ಕೂ ಏನು ಸಂಬಂಧ? ಯಾವುದೋ ಪಕ್ಷ ಏನೋ ಮಾಡಿದರೆ ಈ ಸಭೆಗೂ ಅದಕ್ಕೂ ಏನು ಸಂಬಂಧ? ಪ್ರಪಂಚದಲ್ಲಿರುವ ಎಲ್ಲ ವಿಷಯಗಳನ್ನೂ ಇಲ್ಲ ತರುವುದಕ್ಕಾಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ವಾಕ್ ಸ್ವಾತಂತ್ರ್ಯ ಇರತಕ್ಕ ಈ ದೇಶದಲ್ಲಿ ಸನ್ಮಾನ ಸಭೆ ನಡೆಸಬೇಕೆಂದು ಸಿಟಿಜನ್ಸ್ ಕಮಿಟಿ ವ್ಯವಸ್ಥೆ ಮಾಡಿದ್ದಾರೆ. ಆ ಸಭೆಯ ನಡವಳಿಕೆಯನ್ನು ಪ್ರತಿಭಟನೆ ಮಾಡುವುದಕ್ಕೆ ಆಡಳಿತ ಕಾಂಗ್ರೆಸ್ ಪಕ್ಷ ವ್ಯವಸ್ಥೆ ಮಾಡಿದೆ. ಅದು ಈ ದಿವಸದ ಪತ್ರಿಕೆಗಳಲ್ಲಿ ಬಂದಿದೆ. ಅವರು ದೊಡ್ಡ ಮೆರವಣಿಗೆಯನ್ನು ಮಾಡುವವರಿದ್ದಾರೆಂದು ಹೇಳಿದ್ದಾರೆ. ವಾಕ್ ಸ್ವಾತಂತ್ರ್ಯವಿರುವ

ಸರ್ಕಾರದಲ್ಲಿ ಏನು ರಕ್ಷಣೆ ಇದೆ ಎಂದು ನೋಡಬೇಕು. ಸರ್ಕಾರ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ, ಅವರ ನಿಲುವು ಏನು ಎನ್ನುವುದನ್ನು ತಿಳಿಸಬೇಕು ಎಂದು ಕೇಳುತ್ತೇನೆ

ಅಧ್ಯಕ್ಷರು.— ಮಾನ್ಯ ಸದಸ್ಯರೂ ಹೊಸ ಅಭ್ಯಾಸ ಮಾಡುತ್ತಿದ್ದಾರೆ. ಅವರಲ್ಲಿ ಈ ಅಭ್ಯಾಸವಿರಲಿಲ್ಲ.

†Sri C. M. ARUMUGHAM(KGF).— Madam Speaker, the point is that the former Supreme Court Judge Mr. Hegde issued a statement giving reasons for his supersession and all that. Ever since then, the Congress–R is conducting black flag demonstrations at various places.

ಶ್ರೀ ಎಸ್. ಎಂ. ಶಿರನಾಳ ಚಂದ್ರಶೇಖರ (ಹೊಸನಗರ).— I rise to a point of order ಮಾನ್ಯ ಸದಸ್ಯರುಗಳು ಯಾವ ರೂಲ್ಸ ಪ್ರಕಾರ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ? ಅವರು ಏನಾದರೂ ನೋಟೀಸ್ ಕೊಟ್ಟಿದ್ದು ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆಯೇ ಎಂದು ತಿಳಿಯಬಯಸುತ್ತೇನೆ.

ಅಧ್ಯಕ್ಷರು.—ನನಗೆ ನೋಟೀಸ್ ಕೊಟ್ಟಿಲ್ಲ, ಅದಕ್ಕೆ ಅವಕಾಶವೂ ಇಲ್ಲ. ಆದರೆ Let us hear his representation.

Sri C. M. ARUMUGHAM.—The point is the Ruling Congress and the Government have made it a point to demonstrate against the former Supreme Court Judge Mr. Hegde not only in Bangalore but in many other places too. What I would submit to you is though one may differ with the views expressed by Mr. Hegde but it is the duty of the Government to give protection to a man who held one of the high offices in the Country being the Judge of the Supreme Court. But no adequate protection was given to him when he arrived at Bangalore. My charge is that the Government in order to help the ruling party and in collusion with the party made Mr. Hegde to be dragged from one place to another and throwing him like a foot ball. Atleast courtesy demands that proper protection should have been given to him. Further demonstrations by other persons and parties are quite different from the demonstrations made by the Ruling Congress party, since it is they who are running the Government and they are fully responsible to give adequate protection to the individual's security.

Sri M. S. KRISHNAN (Malleswaram).—As was stated by my friend Sri Arumugham, I am also interested in seeing that proper protection is given to personalities. One may agree with the views of Sri Hegde or may not; one party may demonstrate in favour and another party may demonstrate against. Our party do not agree with the views of Sri Hegde and we demonstrated. The Congress (R) persons were also there. On the one side there was the Congress (O), Jan Sangh and Kannada Chaluvaligararu members and on the other side the Communist Party and Congress (R) members. But it was the duty of the Police to see that these people did not come to clash. In the beginning there were very few policemen, but after the clash more Policemen came. Actually the police beat the people who were demonstrating, and one of our leading members Sri Gopi was assaulted and beaten and we had to take him to the Bowring Hospital-he is still in the Hospital. That is not the way the Police should conduct themselves. I would humbly submit that proper bundobust should be done hereafterwards. Everyone is free to express his opinion.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಆಡಳಿತ ಪಕ್ಷದವರೇ ಇಂದು ಒಂದು ಪ್ರತಿಭಟನಾ ಪ್ರದರ್ಶನವನ್ನು ನಡೆಸುವುದು ಎಂದರೆ ಇದು ಬೇಲಿಯೇ ಎದ್ದು ಹೊಲಮೇದಂತಾಗುತ್ತದೆ ಇವೊತ್ತು ಮಾನ್ಯ ಸುಪ್ರೀಂ ಕೊರ್ಟು ಜಡ್ ಜ್ ಆಗಿದ್ದ ಶ್ರೀ ಹೆಗ್ಗಡೆಯವರು ಒಂದು ಸಭೆಯಲ್ಲಿ ಭಾಗವಹಿಸುವಾಗ ಅದಕ್ಕೆ ವಿರುದ್ಧವಾಗಿ ಆಡಳಿತದ ಪಕ್ಷದವರೇ ಆಗಿರುವವರು ಇಂತಹ ಪ್ರದರ್ಶನ ನಡೆಸುವುದು ಎಂದರೆ ಇದು ಸರಿಯಾದುದಲ್ಲ. ಇಂದು ಈ ಸಭೆಯಲ್ಲಿ ಅಧ್ಯಕ್ಷರಾಗಿ ಭಾಗವಹಿಸುತ್ತಿರುವವರು ಹಿಂದೆ ಚೀಫ್ ಜಸ್ಟಿಸ್ ಆಗಿದ್ದ ಶ್ರೀಮಾನ್ ಕೋಕಾ ಸುಬ್ಬರಾವರವರು. ಇಂತಹ ಒಂದು ಸಭೆಯನ್ನು ಧ್ವಂಸ ಮಾಡಲಿಕ್ಕೆ ಈ ರೀತಿಯಾಗಿ ಒಂದು ಪ್ರತಿಭಟನಾ ಪ್ರದರ್ಶನ ನಡೆಸುವುದು ಎಂದರೆ ಇದು ಸರಿಯಾದ ನೀತಿಯಾಗುವುದಿಲ್ಲ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಈ ವಿಷಯದಲ್ಲಿ ತಮ್ಮ ಅನುಮತಿ ಕೇಳುವುದು ಇಷ್ಟೇ. ಇವೊತ್ತು ಸಂಜೆ ಆರು ಗಂಟೆಗೆ ಒಂದು ಸಭೆಯನ್ನು ಏರ್ಪಾಡು ಮಾಡಿದ್ದಾರೆ. ಇದರಲ್ಲಿ ಕೆಲವು ರಾಜಕೀಯ ಪಕ್ಷದ ಮುಖಂಡರುಗಳೂ ಇರುತ್ತಾರೆ. ಅದರಂತೆ ಇಂದು ಆಡಳಿತ ಕಾಂಗ್ರೆಸ್ಸು ಪಕ್ಷದ ವತಿಯಿಂದ ಇದಕ್ಕೆ ಪ್ರತಿಭಟನೆ ಸೂಚಿಸಲೋಸುಗ ಇಂದು ಬೆಂಗಳೂರಿನಲ್ಲಿರುವ ಮೈಸೂರು ಬ್ಯಾಂಕು ಚೌಕದಿಂದ ಮೆರವಣಿಗೆ ಹೊರಡುತ್ತದೆ ಎಂದು ಒಂದು ಪ್ರಕಟಣೆಯನ್ನೂ

ಹೊರಡಿಸಿದ್ದಾರೆ. ಇದರ ಬಗ್ಗೆ ನಾನು ಏನೂ ಹೇಳಲು ಹೋಗುವುದಿಲ್ಲ. ನಾನು ಇಲ್ಲಿ ಶ್ರೀಮಾನ್ ಹೆಗ್ಗಡೆಯವರು ಹೇಳುವ ಅಭಿಪ್ರಾಯ ಸರಿ ಇಲ್ಲವೇ ಸರಿಯಲ್ಲ ಎನ್ನುವ ಒಂದು ವಿವರಗಳಿಗೂ ನಾನು ಹೇಳಲು ಹೋಗುವುದಿಲ್ಲ. ಬಹುಶಃ ಎಲ್ಲ ರಾಜಕೀಯ ಪಕ್ಷಗಳೂ ಇಂತಹ ಒಂದು ಪ್ರದರ್ಶಗಳನ್ನು ನಡೆಸುವುದು ಅಂತಹ ಪಕ್ಷಗಳವರ ಹಕ್ಕು, ನಾನು ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ, ಆದರೆ ಇಂದು ಆಡಳಿತ ಪಕ್ಷದಲ್ಲಿರುವವರು ಅನುಸರಿಸತ್ತಿರುವ ವರ್ತನೆ ನೋಡಿದಾಗ ನನಗೆ ತುಂಬಾ ವಿಷದವಾಗುತ್ತದೆ. ಬಹುಶಃ ಈ ದೇಶದಲ್ಲಿ ಒಂದು ನ್ಯಾಯವಾದ ವೇದಿಕೆಯ ಮೇಲೆ ವ್ಯಕ್ತಿಗಳು ಅವರ ನ್ಯಾಯವಾದ ಅಭಿಪ್ರಾಯಗಳನ್ನು ವ್ಯೆಕ್ತಮಾಡುವಾಗ ಅದಕ್ಕೆ ಪ್ರತಿಯಾಗಿ ವಿರೋಧವನ್ನೂ ವ್ಯಕ್ತಮಾಡುವುದೂ ಒಂದು ರೀತಿಯಾಗಿ ಸಂಪ್ರದಾಯವಾಗಿದೆ. ಮತ್ತು ಅದಕ್ಕೆ ಕೆಲವು ನಿಯಮಾವಳಿಗಳೂ ಇವೆ ನಾನು ಮಾನ್ಯ ಶ್ರೀ ಹೆಗ್ಗಡೆಯವರು ರೇಲ್ವೆ ಸ್ಟೇಷನ್ನಿಗೆ ಬಂದಾಗ ಅವರನ್ನು ನೋಡಲು ನನಗೆ ಅವಕಾಶವಾಗಲಿಲ್ಲ. ಮತ್ತು ಬೇರೆ ಯಾವ ಪಕ್ಷಗಳವರಿಗೂ ಅವರನ್ನು ನೋಡಲು ಅವಕಾಶವಾಗದೆ ಕಷ್ಟಗಳಾದವು. ಇದರ ಬಗ್ಗೆ ನಾನು ವಿಷಾದದಿಂದ ಹೇಳಬೇಕಾಗಿರುವುದು ಪ್ರಾಮಾಣಿಕವಾಗಿ ಆಲ್ಲಿದ್ದ ಪೋಲೀಸು ಅಧಿಕಾರಿಗಳೂ ಕೂಡ ಸರಿಯಾದ ವ್ಯವಸ್ಥೆ ಮಾಡಲಿಲ್ಲ. ಈಚೆಗೆ ಬೆಂಗಳೂರಿಗೆ ಮಾನ್ಯ ಶ್ರೀಮತಿ ಇಂದಿರಾಗಾಂಧಿಯವರು ಇಲ್ಲಿಗೆ ಬಂದಾಗ ಕೆಲವು ಪಕ್ಷಗಳವರು ಅವರ ವಿರುದ್ದ ಪ್ರತಿಭಟನೆ ನಡಸಲು ಅಲ್ಲಿಗೆ ಬಂದಾಗ ಅಲ್ಲಿದ್ದ ಪೋಲೀಸು ಅಧಿಕಾರಿಗಳು ಅವರ ಗುಂಪಿನಲ್ಲಿದ್ದ ಸುಮಾರು ೨೪ ಜನರನ್ನು ೧೨ ಅಡಿ ೮ ಅಡಿ ಇರುವ ಒಂದೇ ರೂಮಿನಲ್ಲಿ ಅದೂ ಕೂಡ ಮೂತ್ರದ ವಾಸನೆ ಇದ್ದ ರೂಮಿನಲ್ಲಿ ೨೪ ಗಂಟೆಗಳ ಕಾಲ ಕೂಡಿಟ್ಟಿದ್ದರು. ಇದರ ಬಗ್ಗೆ ನಾವೆಲ್ಲರೂ ಕೂಡ ಪ್ರತಿಭಟನೆ ಮಾಡಿದೆವು ಮತ್ತು ಇದರ ಬಗ್ಗೆ ನಾನು ಇಲ್ಲಿ ತಮಗೆ ಕಾಗದ ಕೂಡ ಬರೆದಿದ್ದೇನೆ. ಅದು ಇಲ್ಲಿ ಚರ್ಚೆಗೆ ಬಂದಾಗ ಅದರ ಬಗ್ಗೆ ಆಗ ಮಾತನಾಡುತ್ತೇನೆ. ಆದರೆ ಪ್ರತಿಯೊಬ್ಬ ಪ್ರಜೆಗೂ ಅವರವರ ಅಭಿಪ್ರಾಯಗಳನ್ನು ತೋರಿಸುವುದಕ್ಕೆ ವ್ಯಕ್ತಿ ಸ್ವಾತಂತ್ರ್ಯ ಇರಬೇಕು. ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡುವುದು ಸರಿಯಲ್ಲ. ಭಾರತದ ಒಬ್ಬ ಪ್ರಜೆಗೆ ಆಳುವ ಸರಕಾರದವರು ಎಲ್ಲ ರೀತಿಯ ರಕ್ಷಣೆಯನ್ನೂ ಕೊಡಬೇಕಾದುದು ಅವರ ಕರ್ತವ್ಯ. ಒಂದು ಕಡೆ ಕಪ್ಪು ಬಾವುಟ ಪ್ರದರ್ಶನ ಮಾಡುವಾಗ ಅದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದು ಕೊಳ್ಳಲು ಅಲ್ಲಿರುವ ಅಧಿಕಾರಿಗಳಿಗೂ ಕಷ್ಟವಾಗುತ್ತದೆ ಆದರೆ ಅಂದು ರೇಲ್ವೆ ಸ್ಟೇಷನ್ನಿನಲ್ಲಿ ಪೋಲೀಸಿನವರು ನಡೆದುಕೊಂಡ ವರ್ತನೆ ನೋಡಿ ನಮಗೆ ತುಂಬಾ ವಿಷಾದವಾಯಿತು. ಪೋಲೀಸಿನವರಿಗೆ ಇಲ್ಲಿ ಕಂಟ್ರೋಲು ಮಾಡುವುದೇ ಕಷ್ಟವಾಯಿತು ಮತ್ತು ಕೆಲವರನ್ನು ಹೊಡೆದರು ಎಂದು ಈಗತನಾನೇ ಶ್ರೀ ಕೃಷ್ಣರವರೂ ಹೇಳಿದರು. ಬಹುಶಃ ಹೂಲಿಗ್ಯಾನಿಸಂಗೆ ಇಲ್ಲಿ ಅವಕಾಶವಾಡಿಕೊಡಬಾರದು, I was only a silent spectator and observer. ನಿಮ್ಮ ಪಕ್ಷದವರೇ ಇಂತಹ ಒಂದು ಕೆಲಸಗಳನ್ನು ಮಾಡಲು ನಿಮ್ಮ ಪೋಲೀಸು ಅಧಿಕಾರಿಗಳು ಅವಕಾಶ ಮಾಡಿಕೊಡು

ವುದು ಒಳ್ಳೆಯ ವರ್ತನೆಯಲ್ಲ ಮತ್ತು ಇದು ಒಳ್ಳೆಯ ಲಕ್ಷಣವು ಅಲ್ಲ. ಇಂತಹ ಒಂದು ಪ್ರತಿಭಟನೆಯನ್ನು ಆಡಳಿತ ಪಕ್ಷದವರೇ ನಡೆಸುವಾಗ ಇಲ್ಲಿನ ಅಧಿಕಾರಿಗಳು ಇದರ ಬಗ್ಗೆ ಸರಿಮಾಡುವುದು ಕಷ್ಟವಾಗುತ್ತದೆ. ಮತ್ತು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುವುದೂ ಕಷ್ಟವಾಗುತ್ತದೆ. ಇಂತಹ ಸಂದರ್ಭದಲ್ಲಿ ಕ್ಲಾಷ್‌ಗಳು ಆಗುತ್ತವೆ ಇಲ್ಲವೇ ಏನಾದರೂ ಅನಾಹುತಗಳಾಗುತ್ತವೆ. ಆದರೆ ಇಲ್ಲಿರುವ ಪರಿಸ್ಥಿತಿಯನ್ನರಿತು ಅಲ್ಲದ್ದಪೋಲೀಸು ಅಧಿಕಾರಿಗಳು ಸರಿಯಾದ ಕ್ರಮ ತೆಗೆದುಕೊಳ್ಳದೇ ಇಂತಹ ಅನಾಹುತಗಳಾಗಲು ಕಾರಣವಾಯಿತು ಎಂದು ವಿಷಾದದಿಂದ ಹೇಳಬೇಕಾಗಿದೆ. ನಾನು ಇಲ್ಲಿ ಸರಕಾರದವರಲ್ಲಿ ಪ್ರಾರ್ಥನೆ ಮಾಡುವುದು ಎಲ್ಲ ಪ್ರಜೆಗಳಿಗೂ ಯಾವರೀತಿ ರಕ್ಷಣೆ ಕೊಡಬೇಕೋ ಅಂತಹ ಒಂದು ರಕ್ಷಣೆಯನ್ನು ಇವರಿಗೂ ಕೊಡಬೇಕು. ಇವೊತ್ತು ನಾನು ಆಡಳಿತ ಪಕ್ಷದ ತತ್ವವನ್ನು ವಿರೋಧಿಸುತ್ತೇನೆ ಎಂದು ಈ ಸಭೆಯ ಹೊರಗಡೆ ಎಲ್ಲಾದರೂ ನಾನು ಒಂದು ಸಭೆಯಲ್ಲಿ ಭಾಷಣ ಮಾಡಿದರೆ ಆಗ ನನ್ನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಮಾಡಲು ಸಾಧ್ಯವೇ? ಇದು ಸರಿಯಾದ ಮಾರ್ಗವಲ್ಲ.

ಶ್ರೀ ವಾಟಾಳ ನಾಗರಾಜ:—ನಾನು ಒಂದೇ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಆಡಳಿತ ಪಕ್ಷದಲ್ಲಿ ಬೆಂಗಳೂರು ಜಿಲ್ಲಾ ಕಾಂಗ್ರೆಸ್ಸು ಪಕ್ಷದ ಅಧ್ಯಕ್ಷರು ಒಂದು ಪ್ರಕಟಣೆ ಹೊರಡಿಸಿ ಇಂದು ಒಂದು ಪ್ರತಿಭಟನಾ ಪ್ರದರ್ಶನ ನಡೆಸುತ್ತೇವೆ ಇದರಲ್ಲಿ ಎಲ್ಲರೂ ಸೇರಬೇಕೆಂದು ಕರೆಕೊಟ್ಟದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ:—ನಿಮ್ಮ ಪಕ್ಷದವರು ಮುಖಂಡರು ಎಂದು ಶ್ರೀಮತಿ ಇಂದಿರಾಗಾಂಧಿಯವರು ಬಂದಾಗ ಒಂದು ರೀತಿ, ಬೇರೆ ಪಕ್ಷದ ನಾಯಕರು ಬಂದಾಗ ಒಂದು ರೀತಿ ಮಾಡಬೇಕೆಂದು ಪೋಲೀಸು ಅಧಿಕಾರಿಗಳು ಇರುತ್ತಾರೇನು? ಎಲ್ಲರಿಗೂ ನ್ಯಾಯವಾದ ರಕ್ಷಣೆ ಕೊಡಲು ಪೋಲೀಸು ಅಧಿಕಾರಿಗಳು ಇರುವುದು.

Sri H. M. CHANNABASAPPA.— I take very serious objection to the utterances of the Leader of the Oppositions. That is not the correct way of putting things.

ಶ್ರೀ ಕೋಣಂದೂರು ಲಿಂಗಪ್ಪ.— ಇಂದಿರಾಗಾಂಧಿಯವರು ಏನು ಹೇಳಿದರೂ ಸರಿ ಏನು? ಇಂದಿರಾಗಾಂಧಿಯವರ ಫ್ಯಾಮಿಲಿ ವಿಚಾರ ಏನು ಎಂಬದು ನಮಗೆ ಗೊತ್ತಿದೆ;

Sri K. H. PATIL.— I raise to a point of order. ಮಾನ್ಯ ಕೋಣಂದೂರು ಲಿಂಗಪ್ಪನವರು ಇಂದಿರಾಗಾಂಧಿಯವರ ಫ್ಯಾಮಿಲಿ ವಿಚಾರ ತಮಗೆ ಗೊತ್ತಿದೆ ಎಂದು ಹೇಳಿದ್ದಾರೆ. Can the highest authority of the land like the Prime Minister could be criticised on the floor of this house ?

ಅಧ್ಯಕ್ಷರು.— ತಾವು ಅಷ್ಟು ಹಗುರವಾಗಿ ಮಾತನಾಡಬಾರದು? ದೊಡ್ಡ ದಾಗಿ ಮಾತನಾಡುವುದಕ್ಕೆ ಬರುತ್ತದೆಂದು ಆ ರೀತಿ ಮಾತನಾಡುವುದು ಸರಿಯಲ್ಲ. (There was uproar from the members of the Opposition).

Sri C. M. ARUMUGHAM.— When the Prime Minister visited Bangalore last time, the Kannada Chaluvaligars wanted to stage a demonstration, they were arrested by the Police and put behind the bar. They were thus prevented from staging a demonstration or say anything againt the Prime Minister.

MADAM SPEAKER.— It is allright if they say anything against the Prime Minister but they cannot say anything againt Smt. Indira Gandhi.

ಶ್ರೀ ಕಾಗೋಡು ತಿಮ್ಮಪ್ಪ.— ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಬಗ್ಗೆ ಏನಾದರೂ ಹೇಳುವಾಗ ಶ್ರೀಮಾನ ಚನ್ನಬಸಪ್ಪನವರ ಹೆಸರನ್ನು ಹೇಳ ಬೇಕಾಗುತ್ತದೆ. ಅದರಲ್ಲಿ ತಪ್ಪೇನು?

ಶ್ರೀ ವಾಟಾಳ ನಾಗರಾಜ್.— ಮೈಸೂರಿಗೆ ಪ್ರಧಾನ ಮಂತ್ರಿಗಳು ಬಂದಾಗ ಕನ್ನಡ ಚಳುವಳಿಗಾರರು ಶಾಂತಿಯುತವಾಗಿ ಚಳುವಳಿ ನಡೆಸಿದರೂ ಸಹ ಅವರನ್ನು ಅರೆಸ್ಟ ಮಾಡಿ ೩೩ ಗಂಟೆಗಳ ಕಾಲದವರೆಗೆ ಲಾಕಪಿನಲ್ಲಿ ಅದೂ ಒಂದೇ ರೂಮಿನಲ್ಲಿ ಕೂಡಿ ಹಾಕಿದ್ದರು. ಬಟ್ಟೆ ಬಿಚ್ಚಿಸಿ ಅವರ ಮೈಮೇಲೆ ಉಗಿದರು. ಈ ರಾಜ್ಯದಲ್ಲಿ ಧರ್ಮ, ಸರಕಾರ ಉಳಿದಿಲ್ಲ. ಇಂದೂ ಸಹ ಸರ್ಕಾರದವರೇ ಅವರ ಪಾರ್ಟಿಯ ಎಂ.ಎಲ್.ಎ. ಗಳನ್ನು, ವಕೀಲರನ್ನು, ಕಾರ್ಪೋರೇಟರಗಳನ್ನು ಆಹ್ವಾನಿಸಿ ಶ್ರೀಮಾನ್ ಹೆಗಡೆಯವರ ಸಭೆಯನ್ನು ರದ್ದು ಮಾಡಬೇಕೆಂದು ಹೊರಟಿದ್ದಾರೆ. ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ. ಆದ್ದರಿಂದ ತಾವು ರಕ್ಷಣೆ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಮಾನ್ಯ ಅಧ್ಯಕ್ಷರೇ, ಈಗ ಅನೇಕ ಮಾನ್ಯ ಸದಸ್ಯರು ನಾನಾ ರೀತಿಯ ವಿಚಾರಗಳನ್ನು ಹೊರಗೆಡವಿದರು. ಕೆಲವು ವಿಚಾರಗಳನ್ನು ಕೇಳಿ ನನಗೆ ಆಶ್ಚರ್ಯ ಆಯಿತು. ಶ್ರೀಮಾನ್ ದೇವೇಗೌಡರು ಹೇಳಿದರು, ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಪಾರ್ಟಿಯವರಿಗೂ ಶಾಂತಿಯುತವಾಗಿ ಪ್ರದರ್ಶನ ಮಾಡುವುದಕ್ಕೆ ಅವಕಾಶವಿದೆ ಎಂದು. ಅದನ್ನು ನಾನು ಒಪ್ಪುತ್ತೇನೆ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಪ್ರದರ್ಶನ ಮಾಡುವುದಕ್ಕೆ ಕಾಂಗ್ರೆಸ್ (ಆರ್)ನವರಿಗೆ ಏನು ಅಧಿಕಾರ ಇದೆ ಎಂದು ಕೇಳಿದರು. ಅಂದರೆ ಅಭಿಪ್ರಾಯಗಳಲ್ಲಿಯೇ ಭಿನ್ನಾಭಿಪ್ರಾಯ ಬಂದಿದೆ. ಒಂದು ಅಂಶವನ್ನು ನಾವು ಮತ್ತು ನೀವು

ತಿಳಿದುಕೊಳ್ಳಬೇಕು. ಏನೆಂದರೆ, ಈ ಸರ್ಕಾರದ ಲೋಪದೋಷ ಅಂದರೆ ಒಮಿಷನ್ಸ್ ಅಂಡ್ ಕಮಿಷನ್ಸ್, ಇದರ ಬಗ್ಗೆ ಏನಾದರೂ ಇದ್ದರೆ ಅದನ್ನು ಈ ಸಭೆಯಲ್ಲಿ ಎಷ್ಟು ಹೊತ್ತು ಬೇಕಾದರೂ ಕೂತು ಚರ್ಚೆ ಮಾಡುವುದಕ್ಕೆ ಮತ್ತು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಮತ್ತು ಖಂಡನೆ ಮಾಡುವುದಕ್ಕೆ ಅಧಿಕಾರವಿದೆ. ಆದರೆ ಇದು ವರೆಗೆ ನಡೆದ ಚರ್ಚೆಗಳು ಎಲ್ಲಿಯೋ ಪ್ರಾರಂಭವಾಗಿ ಎಲ್ಲಿಗೋ ಹೋಯಿತು. ಇಂದಿರಾಗಾಂಧಿಯವರು ಬಂದಾಗ ಕೆಲವರನ್ನು ಕಟ್ಟಿ ಹಾಕಿದರು, ಆದರೆ ಇವರು ಬಂದಾಗ ಯಾರನ್ನೂ ಕಟ್ಟಿಹಾಕಲಿಲ್ಲ ಎಂದು ಹೇಳಿದರು. ಸರ್ಕಾರ ಒಂದು ಮಹತ್ತರವಾದ ಜವಾಬ್ದಾರಿಯನ್ನು ಹೊಂದಿದೆ. ಆದರಂತೆ ಪ್ರತಿಯೊಬ್ಬರಿಗೂ ರಕ್ಷಣೆ ಕೊಡಬೇಕಾಗಿದೆ. ಅವರು ದೊಡ್ಡವರೇ ಆಗಲಿ, ಚಿಕ್ಕವರೇ ಆಗಲಿ, ರಕ್ಷಣೆ ಕೊಡಬೇಕಾದದ್ದು ಸರ್ಕಾರದ ಹೊಣೆ. ಎಲ್ಲಿ ಈ ರೀತಿ ರಕ್ಷಣೆ ಕೊಡುವದಕ್ಕೆ ಸರಕಾರಕ್ಕೆ ಸಾಧ್ಯವಾಗಲಿಲ್ಲ ಅಲ್ಲಿ ಸರ್ಕಾರದ ಹೊಣೆಗಾರಿಕೆ ಹೋಯಿತು. ಅಂಥಾದ್ದು ಏನಾದರೂ ಇದ್ದರೆ, ಇಂತಹ ಹೊಣೆಗಾರಿಕೆಯನ್ನು ಇವರು ಮಾಡಲಿಲ್ಲ ಎನ್ನುವ ಆಕ್ಷೇಪಣೆ ಇದ್ದರೆ, ಅಗತ್ಯವಾಗಿ ಅಂತಹ ಆಕ್ಷೇಪಣೆಯನ್ನು ತಾವು ಮಾಡುವದಕ್ಕೆ ನ್ಯಾಯವಿದೆ ಮತ್ತು ಅಂತಹ ವಿಚಾರವನ್ನು ವಿಚಾರ ಮಾಡುವುದು ನ್ಯಾಯವಿದೆ. ಈಗ ಒಬ್ಬರು ಮಹನೀಯರು ಈ ರಾಜ್ಯಕ್ಕೆ ಬಂದರು ಎಂದಾಗ, ಅವರ ಪರವಾಗಿ ಪ್ರದರ್ಶನ ಮಾಡಬೇಕೆಂದು ಕೆಲವರು, ವಿರುದ್ಧವಾಗಿ ಪ್ರದರ್ಶನ ಮಾಡಬೇಕೆಂದು ಕೆಲವರು ಅಭಿಪ್ರಾಯ ಪಟ್ಟರೆ ಅದಕ್ಕೆ ಎಲ್ಲರಿಗೂ ಅಧಿಕಾರವಿದೆ. ಶಾಂತಿಯುತವಾಗಿ ಪ್ರದರ್ಶನ ಮಾಡುವುದಕ್ಕೆ ಮತ್ತು ಅವರ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶವಿದೆ. ಮತ್ತು ಹಸಿರು ಬಾವುಟ, ಕೆಂಪು ಬಾವುಟ ಅಥವಾ ಬಿಳಿ ಬಾವುಟಗಳನ್ನು ಇಂಥ ಸಂದರ್ಭಗಳಲ್ಲಿ ಹಿಡಿಯುವವರು ಇರುತ್ತಾರೆ. ಆದರೆ ಇದರಿಂದ ಸಾರ್ವಜನಿಕ ರಕ್ಷಣೆಗೆ ಭಂಗ ಬರುತ್ತದೆ, ಶಾಂತಿಗೆ ಭಂಗ ಬರುತ್ತದೆ ಎಂದು ಕಂಡುಬಂದರೆ, ಅಂತಹ ಕಾಲದಲ್ಲಿ ಶಾಂತಿ ಭಂಗ ಉಂಟಾಗದಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಯೇ ವಿನಃ ಶಾಂತಿ ಭಂಗ ಉಂಟಾಗದಿದ್ದರೆ ಅವರು ಪ್ರದರ್ಶನ ಮಾಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ, ಇವರು ಪ್ರದರ್ಶನ ಮಾಡುವುದನ್ನ ತಪ್ಪಿಸುವುದಕ್ಕಾಗುವುದಿಲ್ಲ; ಆದರೆ ಪ್ರದರ್ಶನಗಳು ಏನಾದರೂ ಶಾಸನಕ್ಕೆ ವಿರುದ್ಧವಾಗಿದ್ದರೆ ಮಾತ್ರ ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಪ್ರವೇಶ ಮಾಡಬಹುದು. ಆದರೆ ವಿಧಿನಿಯಮಗಳಿಗೆ ಅನುಗುಣವಾಗಿ ಶಾಂತಿಯುತವಾಗಿ ಪ್ರದರ್ಶನ ಮಾಡುವುದಕ್ಕೆ ಎಲ್ಲರಿಗೂ ಅಧಿಕಾರವಿದೆ. ಇಷ್ಟು ಹೊತ್ತು ಮಾತನಾಡಿದ್ದರಲ್ಲಿ, ಅವರು ರೈಲಿನಿಂದ ಇಳಿಯುವುದಕ್ಕೇ ಕಷ್ಟವಾಯಿತು ಎಂದು ಹೇಳಿದರು. ಒಬ್ಬ ದೊಡ್ಡ ಮನುಷ್ಯರು, ಪ್ರಮುಖವಾದಂಥ ಮನುಷ್ಯರು ಬರುವ ಕಡೆ ಜನಸಂದಣಿ ಇರುತ್ತದೆ. ಎಲ್ಲ ಪಾರ್ಟಿಯ ಜನರೂ ಬಂದಿರುತ್ತಾರೆ; ಆ ಸಮಯದಲ್ಲಿ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅಧಿಕಾರವಿದೆ. ಇಲ್ಲಿ ಸರ್ಕಾರದ ಹೊಣೆ ಎಲ್ಲಿದೆ ಎಂದರೆ, ಅವರು ಬರುವ ಸಮಯದಲ್ಲಿ ಯಾರಿಗಾದರೂ ನೋವಾಗಿದ್ದರೆ ರಕ್ಷಣೆ ಕೊಡುವುದು ಸರ್ಕಾರದ ಹೊಣೆಯೇ ವಿನಃ....

ಶ್ರೀ ಎಚ್. ಡಿ. ದೇವೇಗೌಡ.— ಅವರ ಪಂಚೆ ಹಿಡಿದು ಎಳೆಯುವುದು, ಮತ್ತು ಅವರನ್ನು ದಬ್ಬುವುದು ಸರಿಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ತಾವು ಹೇಳಿದ್ದನ್ನು ನಾನು ಕಳಕಳಿಯಿಂದ ಕೇಳಿದ್ದೇನೆ. ಆದ್ದರಿಂದ ನಾನು ಹೇಳತಕ್ಕಂಥದ್ದನ್ನು ತಾವು ಕೇಳತಕ್ಕದ್ದು ಸರಿ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ತಾವು ಹೇಳುವುದನ್ನು ನಾನು ಬಹಳ ವಿಶ್ವಾಸದಿಂದ ಕೇಳಿದ್ದೇನೆ. ಯಾರಾ ದರೂ ದೊಡ್ಡ ಮನುಷ್ಯರು ಬಂದರೆ ಅವರನ್ನು ನೋಡಬೇಕೆಂದು ಜನಗಳು ನೂಕುನುಗ್ಗಲಿನಲ್ಲಿ ಮುನ್ನುಗ್ಗುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.— ಇವೊತ್ತು ಶ್ರೀಮಾನ್ ಹೆಗಡೆಯವರು ಬಂದಾಗ ಈ ರೀತಿ ಆಗಿರಬಹುದು. ನಾಳೆ ಚನ್ನಬಸಪ್ಪನವರು ಬಂದರೆ ಇದೇ ರೀತಿ ಏಟು ಬೀಳುತ್ತದೆ. ಅದನ್ನು ಬರೆದು ಇಟ್ಟುಕೊಳ್ಳಿ. ಅಮೆರಿಕಾದ ಅಧ್ಯಕ್ಷರಾಗಿದ್ದ ಶ್ರೀಮಾನ್ ಕೆನಡಿಯವರನ್ನು ಕೊಲ್ಲುವಾಗ ಯಾವ ಪೋಲೀಸಿನವರೂ ಅವರನ್ನು ತಪ್ಪಿಸುವುದಕ್ಕೆ ಸಾಧ್ಯವಾಗಲಿಲ್ಲ. ಶ್ರೀಮಾನ್ ಹೆಗಡೆಯವರು ಲೈಪ್ಟಿ ಜೋಗಿಯಿಂದ ಕೆಳಕ್ಕೆ ಇಳಿಯುವಾಗ ಕೆಲವರು ಅವರ ಬಟ್ಟೆಯನ್ನು ಹಿಡಿದು ಎಳೆದರು.

Sri H. M. CHANNABASAPPA.— Is it fair on the part of the Leader of the Opposition to disturb me. There is a way to differ from me. You have got every right to say what I am saying is not correct. But when I am on my legs it is not correct to disturb me. If you are not satisfied there is a way of telling it.

ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಮಂತ್ರಿಗಳು ಮಾತನಾಡುವಾಗ ವಾಸ್ತವಾಂಶಗಳನ್ನು ಮರೆಮಾಚಿ ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ಶ್ರೀಮಾನ್ ಹೆಗಡೆಯವರಿಗೆ ಕೆಲವರು ಅಪಮಾನ ಮಾಡಬೇಕು ಎಂದು ಪ್ರಯತ್ನ ಮಾಡಿದರು.

ಶ್ರೀ ವಾಟಾಳ ನಾಗರಾಜ.—ಇದು ನಿಜವಾಗಿಯೂ ಸರ್ಕಾರದ ವರದಿಯಲ್ಲ. ಬೇರೆ ಪಾರ್ಟಿಯವರಿಗೆ ಸರ್ಕಾರದವರು ರಕ್ಷಣೆ ಕೊಡದಿದ್ದರೆ ಹೇಗೆ? ಶ್ರೀಮಾನ್ ಚನ್ನಬಸಪ್ಪನವರಿಗೆ ಭಾಷಣ ಮಾಡತಕ್ಕ ಶಕ್ತಿ ಇದೆ. ಆದ್ದರಿಂದ ಅವರು ತಾತ್ಕಾಲಿಕ ವಾಗಿ ಒಂದು ಹೇಳಿಕೆಯನ್ನು ಕೊಡುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ರಕ್ಷಣೆ ಕೊಡುವ ವಿಷಯದಲ್ಲಿ ಸರ್ಕಾರ ದವರು ಹೊಣೆಯನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ಸ್ಪಷ್ಟವಾಗಿ ತಿಳಿಸುತ್ತಿದ್ದೇನೆ.

ಶ್ರೀ ವಾಟಾಳ ನಾಗರಾಜ.—ಅಡಳಿತ ಕಾಂಗ್ರೆಸ್‌ನವರು ಪ್ರದರ್ಶನ ಮಾಡುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು.—ಈಗ ಇದುವರೆಗೂ ತಾವು ಹೇಳಿದ್ದನ್ನು ಅವರು ಕೇಳಿದ ಮೇಲೆ, ಈಗ ಅವರು ಹೇಳುವುದನ್ನೂ ತಾವು ಕೇಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಒಂದು ಸಾರ್ವಜನಿಕ ಸಭೆಯನ್ನು ಏರ್ಪಾಟು ಮಾಡಿದ್ದಾರೆ. ಅದಕ್ಕೆ ಕೆಲವರು ಪ್ರತಿಭಟನೆ ಸೂಚನೆ ಮಾಡಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ — ದೊಂಬಿ ಆಗುತ್ತದೆ ಎಂದು ಆ ಸಭೆಯನ್ನು ಕ್ಯಾನ್ಸಲ್ ಮಾಡಿದರು ಎಂದು ಹೇಳುತ್ತಾ ಇದ್ದಾರೆ. ಇಲ್ಲಿ ವಾಕ್ ಸ್ವಾತಂತ್ರ್ಯಕ್ಕೂ ಧಕ್ಕೆ ಬಂದಿದೆ.

ಅಧ್ಯಕ್ಷರು.—ಸರ್ಕಾರದವರು ಉತ್ತರ ಹೇಳುವುದನ್ನು ಕೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೊತ್ತು ಸಂಜೆ ಅವರು ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ್ದಾರೆ, ಅವಕ್ಕೆ ಪ್ರತಿಭಟನೆ ಸೂಚಿಸುವುದಕ್ಕೆ ಕೆಲವರು ಮೆರವಣಿಗೆ ಇಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದು ತಪ್ಪಲ್ಲ. ಒಂದು ವೇಳೆ ಈ ಪಾರ್ಟಿಯವರು ಒಂದು ಸಭೆಯನ್ನು ಏರ್ಪಡಿಸಿದ್ದರೆ ಅದು ಸರಿಯಲ್ಲ ಎಂದು ಇನ್ನೊಂದು ಪಾರ್ಟಿಯವರು ಹೇಳತಕ್ಕಂಥಾದ್ದಾಗಲೀ ಮೆರವಣಿಗೆ ಮಾಡುವುದಾಗಲೀ ಕಾನೂನು ಬದ್ಧವಾಗಿ ತಪ್ಪಾಗುವುದಿಲ್ಲ. ಆದರೆ ಅದರಿಂದ ಸಾರ್ವಜನಿಕ ಶಾಂತಿಗೆ ಭಂಗ ತರತಕ್ಕಂಥಾ ಸೂಚನೆಗಳು ಇದ್ದರೆ ಅವುಗಳ ಬಗ್ಗೆ ಮುನ್ನೆಚ್ಚರಿಕೆ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕೋ ಅದು ಸರ್ಕಾರಕ್ಕೆ ಗೊತ್ತಿದೆ. ಅದನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.— ಶಾಂತಿಗೆ ಭಂಗ ಆದರೆ ಆ ಸಭೆಯನ್ನು ನಿಲ್ಲಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಯಾವ ಸಂದರ್ಭದಲ್ಲಿ ಏನಾಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಸರ್ಕಾರದ ಹೊಣೆ ಪ್ರತಿಯೊಬ್ಬರಿಗೂ ರಕ್ಷಣೆಯನ್ನು ಕೊಡತಕ್ಕದ್ದು. ಸಭೆಗಳನ್ನು ನಡೆಸುವುದಕ್ಕೆ ರಕ್ಷಣೆ ಕೊಡತಕ್ಕದ್ದು ನಮ್ಮ ಕರ್ತವ್ಯ ಇದೆ. ಆ ಕರ್ತವ್ಯ ನಮ್ಮದಲ್ಲ ಎಂದು ನಾನು ಹೇಳಲಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು ಯಾವ ತರಹ ಪ್ರೊಟೆಕ್ಷನ್ ಕೊಡುತ್ತೀರಿ ಅಲ್ಲಿ ಸಭೆ ನಡೆಸುವುದಕ್ಕೆ ಪ್ರೊಟೆಕ್ಷನ್ ಕೊಡುತ್ತೀರಾ ಅಥವಾ ಸಭೆ ನಡೆಸದೇ ಇರುವುದಕ್ಕೆ ಪ್ರೊಟೆಕ್ಷನ್ ಕೊಡುತ್ತೀರಾ ? ಶಾಂತಿ ಭಂಗ ಮಾಡುವುದಕ್ಕೆ ಅವರಿಗೆ ಪ್ರೊಟೆಕ್ಷನ್ ಕೊಡುತ್ತೀರಾ ? ಈಗ ನಾಳೆ ಮದುವೆ ಮಾಡುತ್ತೀರಿ, ನಿಮ್ಮ (ಆರ್) ಯುತ್ ಕಾಂಗ್ರೆಸ್‌ನವರು ಗಲಾಟೆ ಮಾಡುತ್ತಾರೆ. ಆಗ ಆ ಮದುವೆಯನ್ನೇ ರದ್ದು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾನು ಅಚ್ಚ ಕನ್ನಡದಲ್ಲಿ ಪುಷ್ಕಳವಾದ ಕನ್ನಡದಲ್ಲಿ ಹೇಳಿದ್ದೇನೆ. ಸಭೆ ನಡೆಸುವುದಕ್ಕೆ, ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾರ್ವಜನಿಕರಿಗೆ ಹಕ್ಕು ಇದೆ. ಯಾವ ಪಾರ್ಟಿಯವರೇ ಆದನ್ನು ಮಾಡಿದರೂ, ಅವರಿಗೆ ಸಭೆ ನಡೆಸುವುದಕ್ಕೆ ರಕ್ಷಣೆಯನ್ನು ಕೊಡುವುದು ಸರ್ಕಾರದ ಕರ್ತವ್ಯ.

ಶ್ರೀ ಕಾಗೋಡು ತಿಮ್ಮಪ್ಪ.— ಇವೊತ್ತು ೬ ಗಂಟೆಗೆ ಸಭೆ ನಡೆಯುತ್ತದೆ. ಆ ಸಭೆ ನಡೆಯುವುದಕ್ಕೆ ರಕ್ಷಣೆ ಬೇಕು ಎಂದು ನಾವು ಅಪೇಕ್ಷೆ ಮಾಡುತ್ತೇವೆ. ಆದ್ದರಿಂದ ಆ ರಕ್ಷಣೆಯನ್ನು ಇವೊತ್ತು ನಮಗೆ ಒದಗಿಸಬೇಕು ಎಂದು ನಾವು ಸರ್ಕಾರವನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇವೆ.'

ಶ್ರೀ ಎಚ್. ಎಂ. ಚನ್ನಬಸಪ್ಪ.— ಎಲ್ಲವನ್ನೂ ನಾನು ಸವಿಸ್ತಾರವಾಗಿ ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇವೊತ್ತು ರಕ್ಷಣೆ ಕೊಡುತ್ತೇವೆ ಎಂದು ಹೇಳಿ ಕಾನೂನು ಪ್ರಶ್ನೆ ಬಂದಾಗ ಕಾನೂನಿನ ದೃಷ್ಟಿಯಿಂದ ನಾಳೆ ಸಭೆಯನ್ನು ಬರಕಾಸ್ತು ಮಾಡಬೇಕು ಎಂದು ಹೇಳಿದರೆ ಕಷ್ಟವಾಗುತ್ತದೆ. ಆದ್ದರಿಂದ ಸಭೆ ನಡೆಸುವುದಕ್ಕೆ ಅವಕಾಶವನ್ನು ಕೊಡಬೇಕು. ಒಂದು ವೇಳೆ ನಿಮ್ಮ ಪಾರ್ಟಿಯವರೇ ಆ ಸಭೆಯ ವಿರುದ್ಧ ಮೆರವಣಿಗೆ ಬಂದು ಕಪ್ಪು ಬಾವುಟವನ್ನು ತೋರಿಸಿದರೂ ಕೂಡ ಆ ಸಭೆ ನಡೆಸುವದಕ್ಕೆ ವ್ಯವಸ್ಥೆ ಮತ್ತು ರಕ್ಷಣೆ ಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ನಾನು ಸ್ಪಷ್ಟವಾಗಿ ಉತ್ತರವನ್ನು ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಮಂತ್ರಿಗಳು ಈಗ ಏನು ಉತ್ತರವನ್ನು ಕೊಟ್ಟಿದ್ದಾರೆ ಅದು ಸಮರ್ಪಕವಾಗಿಲ್ಲ. ಶ್ರೀಮಾನ್ ಹೆಗ್ಗಡೆಯವರು ರೈಫ್ಲೆ ಬೋಗಿಯಿಂದ ಹ್ಯಾಂಡ್ಲ್ ಹಿಡಿದುಕೊಂಡು ಇಳಿಯುವಾಗ ಕೆಲವರು ಅವರ ಮುಖದ ಮೇಲೆ ಕಪ್ಪು ಬಾವುಟವನ್ನು ಎಸೆದರು. ಅವರು ಆಡಳಿತ ಪಕ್ಷದ ಕಾರ್ಯಕರ್ತರು ಎಂದು ಹೇಳಿ ಅವರ ಮೇಲೆ ಪೋಲೀಸ ಅಧಿಕಾರಿಗಳು ಯಾವ ಕ್ರಮವನ್ನೂ ತೆಗೆದು ಕೊಳ್ಳಲಿಲ್ಲ. ಕಳೆದ ೫೫ ವರ್ಷಗಳಿಂದ ಆಡಳಿತವನ್ನು ನಡೆಸತಕ್ಕ ಪಕ್ಷದವರು ಯಾರೂ ಪ್ರದರ್ಶನ ನಡೆಸಿದ್ದು ಇಲ್ಲ. ಬೇರೆಯವರು ಆಡಳಿತ ಪಕ್ಷದವರ ವಿರುದ್ಧ ತಮ್ಮ ಅತೃಪ್ತಿಯನ್ನು ವ್ಯಕ್ತ ಮಾಡುವುದಕ್ಕಾಗಿ ಪ್ರದರ್ಶನ ಮಾಡುತ್ತಿದ್ದರು. ಇವೊತ್ತು ಆಡಳಿತವನ್ನು ನಡೆಸತಕ್ಕ ಪಕ್ಷದವರು ಬೇರೆ ರಾಜಕೀಯ ಪಕ್ಷಗಳ ವಿರುದ್ಧ ಪ್ರತಿಭಟನೆ ಮಾಡತಕ್ಕದ್ದು ಹೊಸ ಪದ್ಧತಿಯಾಗಿದೆ. ಇವೊತ್ತು ನಮ್ಮ ಪಕ್ಷದ ಶಾಸಕರು ಹಾಗೂ ನಮ್ಮ ಪಕ್ಷದ ಧುರೀಣರು ಆ ಒಂದು ಸಭೆಯಲ್ಲಿ ಭಾಗವಹಿಸತಕ್ಕ ಕಾಲದಲ್ಲಿ ಆ ಸಭೆಯನ್ನು ನಡೆಸುವುದಕ್ಕೆ ರಕ್ಷಣೆ ಕೊಡತಕ್ಕ ವಿಷಯದಲ್ಲಿ ಸರ್ಕಾರ

ದಿಂದ ಸರಿಯಾದಂತಹ ಒಂದು ಉತ್ತರ ಬಾರದೆ ಹೋದರೆ ಕಷ್ಟವಾಗುತ್ತದೆ. ಆಡಳಿತವನ್ನು ನಡೆಸತಕ್ಕ ಪಕ್ಷದ ಕಾರ್ಯಕರ್ತರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾದರೆ ಯಾವ ಪೋಲೀಸ ಅಧಿಕಾರಿಗಳೇ ಆಗಲಿ ೧೦ ಸಾರಿ ಯೋಚನೆ ಮಾಡಬೇಕಾಗುತ್ತದೆ.

2-30 P. M.

ನಿಮ್ಮ ಪಕ್ಷದ ಧೋರಣೆಯ ವಿರುದ್ಧ ಅದರಲ್ಲೂ ಸರ್ಕಾರದ ವತಿಯಿಂದ ಇರತಕ್ಕಂತಹ ನೀತಿ ಏನಿದೆ, ಇದನ್ನು ಖಂಡಿಸಿ ನಾವು ಸಭಾ ತ್ಯಾಗ ಮಾಡಿ ಹೊರಗೆ ಹೋಗುತ್ತೇವೆ.

(ವಿರೋಧ ಪಕ್ಷದ ನಾಯಕರ ಜೊತೆ ಇತರ ಸದಸ್ಯರು ಸಹ ಘೋಷಣೆಗಳನ್ನು ಕೂಗಿಕೊಂಡು ಸಭಾತ್ಯಾಗ ಮಾಡಿದರು)

Renuka Yellamma Devasthana (Administration) Bill, 1973

Introduction.

Sri N. HUTCHMASTHY GOWDA (Minister for Revenue).— Madam Speeker, I beg to introduce the Renuka Yellamma Devasthana (Administration) Bill 1973.

MADAM SPEAKER.— The Renuka Yellamma Devasthana (Administration) Bill, 1973 is introduced.

(The Bill is appended as Annexure to this volume.)

Charitable Endowments (Mysore Amendment) Bill, 1973— Motion to Consider

Sri A. R. BADARINARAYANA (Minister for Education).— I move "that the Charitable Endowments (Mysore Amendment) Bill, 1973 be taken into consideration."

MADAM SPEAKER.— Motion moved :

"That the Charitable Endowments (Mysore Amendment) Bill, 1973 be taken into consideration."

†Sri A. R. BADARINARAYANA.— I wish to make a few remarks in this matter.

Considerable time, labour and procedural delay is involved at the Government level in accepting endowments under the Charitable Endowments Act, 1890 even where